# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ನಗರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-232015,
ಮೊಬೈಲ್: 9448994845
ಫ್ಯಾಕ್ಸ್: 08232-233600
ಇ-ಮೇಲ್: aee_maddur@rediffmail.com

ಕ್ರಮಾಂಕ:ಸಕಾನಿಇಂ(ವಿ)/ಸಲೆಅ/ಕಾ&ಪಾ,ನಉವಿ/ಮದ್ದೂರು-1/2018-19/ 4957-64 ದಿನಾಂಕ: 28/2/19.
ಲಗತ್ತು:

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ., ವಿಭಾಗ ಕಛೇರಿ, ಮದ್ದೂರು ರವರ ಅಧ್ಯಕ್ಷತೆಯಲ್ಲಿ ಉಪವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ:22.02.2019 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ನಗರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ / ಸಿಬ್ಬಂದಿ | ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ರವಿಶಂಕರ್ | ಕಾ ನಿ ಇಂ(ವಿ) | ಮದ್ದೂರು ವಿಭಾಗ |
| 2 | ಶ್ರೀ ಎಸ್.ರಾಜೇಂದ್ರ | ಸ ಕಾ ಇಂ(ವಿ) | ಮದ್ದೂರು ನಗರ ಉಪವಿಭಾಗ |
| 3 | ಶ್ರೀ ಜಿ.ಮೋಹನ್ | ಸ ಕಾ ಇಂ(ವಿ) | ಮದ್ದೂರು ಗ್ರಾಮಾಂತರ ಉಪವಿಭಾಗ |
| 4 | ಶ್ರೀ ಎನ್.ನಾಗರಾಜು | ಸಹಾಯಕ ಲೆಕ್ಕಾಧಿಕಾರಿ | ಮದ್ದೂರು ವಿಭಾಗ |
| 5 | ಕು. ರಾಖಿ ಆರ್. | ಸಹಾಯಕ ಲೆಕ್ಕಾಧಿಕಾರಿ | ಮದ್ದೂರು ನಗರ ಉಪವಿಭಾಗ |
| 6 | ಶ್ರೀಮತಿ ಎಸ್.ಸುವರ್ಣ | ಸ ಇಂ(ವಿ) ತಾಂತ್ರಿಕ | ಮದ್ದೂರು ನಗರ ಉಪವಿಭಾಗ |
| 7 | ಶ್ರೀ ಎಂ.ಪಿ ಪ್ರಕಾಶ್ | ಸ ಇಂ(ವಿ) | ಪಟ್ಟಣ ಶಾಖೆ, ನಗರ ಉಪವಿಭಾಗ ಮದ್ದೂರು |
| 8 | ಶ್ರೀ ಮೊಹಮ್ಮದ್ ಸಲ್ಲಾವುದ್ದೀನ್ ಖಾನ್ | ಸ ಇಂ(ವಿ) | ಕಾ & ಪಾ ಘಟಕ-1, ನಗರ ಉಪವಿಭಾಗ ಮದ್ದೂರು |
| 9 | ಶ್ರೀ ರಾಮಚಂದ್ರ ಹೆಚ್.ಸಿ. | ಕಿ ಇಂ(ವಿ) | ಸೋಮನಹಳ್ಳಿ ಶಾಖೆ, ನಗರ ಉಪವಿಭಾಗ ಮದ್ದೂರು |
| 10 | ಶ್ರೀ ಆರ್.ಪ್ರಕಾಶ್ | ಪ್ರ ಕಿ ಇಂ(ವಿ) | ಗೆಜ್ಜಲಗೆರೆ ಶಾಖೆ, ನಗರ ಉಪವಿಭಾಗ ಮದ್ದೂರು |
| 11 | ಶ್ರೀ ಹೆಚ್.ಎಂ.ಮಹೇಶ್ ಕುಮಾರ್ | ಹಿರಿಯ ಸಹಾಯಕ | ಮದ್ದೂರು ನಗರ ಉಪವಿಭಾಗ |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ವಿಭಾಗ ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಯಿಸಿ ಉತ್ತರಿಸಲಾಯಿತು.

ಮೊದಲನೆಯದಾಗಿ ಶ್ರೀ ಎಸ್.ರಾಜೇಂದ್ರ, ಸ.ಕಾ.ನಿ.ಇಂ(ವಿ) ನಗರ ಉಪವಿಭಾಗ ರವರು ಹಿಂದಿನ ಜನಸಂಪರ್ಕ ಸಭೆಯ ನಡಾವಳಿ ಹಾಗೂ ತೆಗೆದುಕೊಂಡ ಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ವಿವರಣೆ ನೀಡಿದರು. ಇದಕ್ಕೆ ಪೂರಕವಾಗಿ ಕಾ.ನಿ.ಇಂ(ವಿ)ರವರು ಸವಿಸ್ತಾರವಾಗಿ ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರಣೆ ನೀಡಿದರು.

ಪು.ತಿ.ನೋ__..

o/c

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು – ಶ್ರೀ ಮಾದಯ್ಯ ಮಾಲಗಾರನಹಳ್ಳಿ | |
| 1 | ಸರಬರಾಜು ಮಾರ್ಗಗಳಿಗೆ ನೇರವಾಗಿ ಸಂಪರ್ಕ ಕಲ್ಪಿಸಿಕೊಂಡು ವಿದ್ಯುತ್ ಉಪಯೋಗಿಸುತ್ತಿದ್ದು, ನಿಯಮಾನುಸಾರ ಕ್ರಮ ಕೈಗೊಳ್ಳಲು ಕೋರಿದರು | ಇದಕ್ಕೆ ಪ್ರತಿಕ್ರಿಯಿಸಿ ಸಂಬಂಧಿಸಿದ ಶಾಖಾಧಿಕಾರಿಗಳಿಗೆ ಸೂಚನೆ ನೀಡಿ ಶೀಘ್ರವಾಗಿ ಸ್ಥಳ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| | ಗ್ರಾಹಕರು– ಶ್ರೀ ಆನಂದಕುಮಾರ್ ಕೆ.ಎನ್., ಕರಡಕೆರೆ ಕೆ.ಎಂ.ದೊಡ್ಡಿ ಶಾಖೆ 9535727230 | |
| 2 | RUIP ಯೋಜನೆಯಡಿ 2018 ರಲ್ಲಿ ಹಣ ಪಾವತಿಸಿದ್ದು, ನಮ್ಮ ಕೊಳವೆ ಬಾವಿ ಇರುವ ಸ್ಥಳದಲ್ಲಿ ಈಗಾಗಲೇ ಪರಿವರ್ತಕವಿದ್ದು, ಈ ಪರಿವರ್ತಕಕ್ಕೆ ಸಂಪರ್ಕ ಕಲ್ಪಿಸಿಕೊಡಲು ಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿ ತಮ್ಮ ಜಮೀನಿನ ಹತ್ತಿರದಲ್ಲಿ ಅಳವಡಿಸಿರುವ ಪರಿವರ್ತಕವು ಸ್ವಂತ ಕಾಮಗಾರಿ ಯೋಜನೆಯಡಿ ಅಳವಡಿಸಿಕೊಂಡಿದ್ದರಾಗಿರುವುದರಿಂದ ಪ್ರತ್ಯೇಕ ಅಂದಾಜು ಪಟ್ಟಿ ತಯಾರಿಸಿ ಕ್ರಮ ಕೈಗೊಳ್ಳಲು ಸೂಚಿಸಿಲಾಯಿತು. |
| | ಗ್ರಾಹಕರು– ಶ್ರೀ ಎಸ್.ಚಿಕ್ಕ ತಮ್ಮಯ್ಯ. ಮಾಲಗಾರನಹಳ್ಳಿ 8722945119 | |
| 3 | ನಮ್ಮ ಜಮೀನಿನ ಮೇಲೆ 4 ACSR ವಾಹಕ ಹಾದು ಹೋಗಿದ್ದು ಪದೇ ಪದೇ ತುಂಡಾಗುತ್ತಿರುತ್ತದೆ. ಆದ್ದರಿಂದ ಶಾಶ್ವತ ಪರಿಹಾರವಾಗುವಂತೆ ವಾಹಕ ಅಳವಡಿಸಿಕೊಡಲು ಸೂಚಿಸಲಾಯಿತು. | ಇದಕ್ಕೆ ಪ್ರತಿಕ್ರಿಯಿಸಿ ಕೂಡಲೇ 8 ಕಿ.ಮೀ.ಗೆ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ತಿಳಿಸಲಾಯಿತು. |
| | ಗ್ರಾಹಕರು– ಬಿದರ ಹೊಸಹಳ್ಳಿ, ಕೆ.ಎಂ.ದೊಡ್ಡಿ ಶಾಖೆ | |
| 4 | ಬಿದರ ಹೊಸಹಳ್ಳಿ ಐ.ಪಿ.ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ನಿಯಮಿತವಾಗಿರುವುದಿಲ್ಲ ಹಾಗು ಶಾಖಾಧಿಕಾರಿ ದೂರವಾಣಿ ಕರೆ ಸ್ವೀಕರಿಸುತ್ತಿಲ್ಲ ಎಂದು ದೂರಿದರು. ಹಾಗೂ ಕೆ.ಎಂ.ದೊಡ್ಡಿ ಶಾಖೆಯಲ್ಲಿ 1 ಸ.ಇಂ.ಹುದ್ದೆ, 1 ಕಿ.ಇಂ. ಹುದ್ದೆ ಖಾಲಿ ಇದ್ದು, ಸುಮಾರು 5 ವರ್ಷಗಳಿಂದ ಸ.ಇಂ.ಹುದ್ದೆ ಖಾಲಿ ಈವರೆಗೆ ನಿಯೋಜಿಸದೆ ತಾತ್ಕಾಲಿಕವಾಗಿ ಮಾಪಕ ಓದುಗರನ್ನು / ಇನ್ನೊಂದು ಶಾಖೆ ಕಿ.ಇಂ.ಗೆ ಹೆಚ್ಚುವರಿ ಪ್ರಭಾರ ನೀಡುತ್ತಿರುವುದರಿಂದ, ವಿದ್ಯುತ್ ಅಡಚಣೆಗಳನ್ನು ಸಕಾಲದಲ್ಲಿ ಸರಿಪಡಿಸಲು ವಿಳಂಬವಾಗುತ್ತಿದೆ. ಆದ್ದರಿಂದ ಕೂಡಲೇ ಸ.ಇಂ.ರನ್ನು ನಿಯೋಜಿಸಿಕೊಡಲು ಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿ ಕೆ.ಎಂ.ದೊಡ್ಡಿ ಶಾಖೆಯಲ್ಲಿ ಎರಡು ಶಾಖೆಗಳಿಗೂ ಒಂದೇ ಶಾಖಾಧಿಕಾರಿ ಇದ್ದು, ಕಾರ್ಯದ ಒತ್ತಡ ಅಧಿಕವಾಗಿದ್ದು ಕೆ.ಎಂ.ದೊಡ್ಡಿ ಶಾಖೆಗೆ ಸಹಾಯಕ ಇಂಜಿನಿಯರ್ ಹಾಕಲು ಮೇಲಧಿಕಾರಿಗಳಿಗೆ ಕೋರಲಾಗುವುದು ಎಂದು ತಿಳಿಸಲಾಯಿತು. ಹಾಗು ಶಾಖಾಧಿಕಾರಿಗೆ ನೋಟಿಸ್ ನೀಡಲು ಸೂಚಿಸಲಾಯಿತು. |
| | ಗ್ರಾಹಕರು– ರಾಮಕೃಷ್ಣ ಅಂಬರಹಳ್ಳಿ, ಕೆ.ಎಂ.ದೊಡ್ಡಿ ಶಾಖೆ 9110813664 | |
| 5 | ಕಂಬ ಬಿದ್ದು ಹೋಗಿದ್ದರಿಂದ ತುರ್ತಾಗಿ ವೈರುಗಳನ್ನು ಮರಕ್ಕೆ ಕಟ್ಟಿರುತ್ತಾರೆ, ಕೂಡಲೇ ಕಂಬ ಅಳವಡಿಸಿ ಕ್ರಮ ಕೈಗೊಳ್ಳಬೇಕೆಂದು ಕೋರಿದರು. | ಕೂಡಲೇ ಕಂಬ ಹಾಕಿಸಿ ವೈರನ್ನು ಕಟ್ಟಿಕೊಡಲಾಗುವುದು ಎಂದು ತಿಳಿಸಲಾಯಿತು |
| | ಗ್ರಾಹಕರು– ಯೋಗೇಶ್ ತಿಪ್ಪೂರು, 9844553269 | |
| 6 | RUIP ಯೋಜನೆಯಡಿ 2018 ರಲ್ಲಿ ಹಣ ಪಾವತಿಸಿದ್ದು, ಕೂಡಲೇ ಕಾಮಗಾರಿ ಮಾಡಿಕೊಡಲು ಕೋರಲಾಯಿತು. | ಇದಕ್ಕೆ ಪ್ರತಿಕ್ರಿಯಿಸಿ ಆದ್ಯತೆ ಮೇರೆಗೆ ಕಾಮಗಾರಿ ಮಾಡಿ ಕೊಡಲು ಕೋರಲಾಯಿತು |
| | ಗ್ರಾಹಕರು– ನಾಗರಾಜು ತಿಪ್ಪೂರು, 6360667529 | |
| 7 | ಐ.ಪಿ ಸ್ಥಾವರಕ್ಕೆ ಲೋ ವೋಲ್ಟೇಜ್ ಇದ್ದು, 100 ಕೆ.ವಿ.ಎ. ಟಿ.ಸಿ. ಇದ್ದು, 12 ಐ.ಪಿ.ಸೆಟ್ ಗೆ ಸಂಪರ್ಕ ಕಲ್ಪಿಸಿದ್ದಾರೆ ಪದೇ ಪದೇ ಸುಡುತ್ತಿರುತ್ತದೆ ಎಂದು ದೂರಿದರು. | ಈ ಸಂಬಂಧ ಪ್ರತಿಕ್ರಿಯಿಸಿ, ವಿದ್ಯುತ್ ವಿತರಣಾ ಕೇಂದ್ರದಿಂದಲೇ ಕಡಿಮೆ ವೋಲ್ಟೇಜ್ ಇದ್ದು, ಸೋಮನಹಳ್ಳಿಯಲ್ಲಿ ಹೊಸದಾಗಿ ಸ್ಟೇಷನ್ ಚಾಲನೆಯಾಗುತ್ತಿರುವುದರಿಂದ ಸಮಸ್ಯೆ ಬಗೆಹರಿಸಲಾಗುವುದು. 5 ಹೆಚ್.ಪಿ.ಗೆ ಮಂಜುರಾತಿ ಪಡೆದು 10 ಹೆಚ್.ಪಿ.ಮೋಟಾರ್ ಓಡಿಸುತ್ತಿರುವುದರಿಂದ ಪದೇ ಪದೇ ಸುಡುತ್ತಿದ್ದು, ಗ್ರಾಹಕರಿಗೆ ಹೆಚ್ಚುವರಿ |

| | | |
|---|---|---|
| | | ಸಂಪರ್ಕ ಪ್ರಮಾಣ ಮಂಜುರಾತಿ ಪಡೆಯಲು ಸೂಚಿಸಲಾಯಿತು. ಮತ್ತು ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಅನಧಿಕೃತ ಐ.ಪಿ.ಸೆಟ್ ಗಳನ್ನು ನಿಷ್ಕ್ರಿಯೆಗೊಳಿಸಲು ಸೂಚಿಸಲಾಯಿತು. |
| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
| | ಗ್ರಾಹಕರು– ಶ್ರೀ ರಾಮಲಿಂಗಯ್ಯ ಮಾಲಗಾರನಹಳ್ಳಿ | |
| 8 | ಐ.ಪಿ ಸ್ಥಾವರಕ್ಕೆ ಲೋ ವೋಲ್ಟೇಜ್ ಇದ್ದು, ಪದೇ ಪದೇ ತಂತಿಗಳು ತುಂಡಾಗುತ್ತಿರುತ್ತದೆ ಎಂದು ದೂರಿದರು. | ಇದಕ್ಕೆ ಪ್ರತಿಕ್ರಿಯಿಸಿ ಲಿಂಕ್ ಲೈನ್ ಮಾಡಿ ಸಮಸ್ಯೆ ಬಗೆ ಹರಿಸಲಾಗುವುದು ಎಂದು ತಿಳಿಸಲಾಯಿತು ಹಾಗು ಸಂಬಂಧಿಸಿದ ಮಾರ್ಗದ ಅಂದಾಜು ಪಟ್ಟಿ ತಯಾರಿಸಲು ಸೂಚಿಸಲಾಯಿತು. |
| | ಗ್ರಾಹಕರು – ಶ್ರೀ ಕೆ.ಬಿ.ವೀರಯ್ಯ, ಕೆ.ಕೆ.ಹಳ್ಳಿ ಕೆ.ಎಂ.ದೊಡ್ಡಿ ಶಾಖೆ 9005405536 | |
| 9 | SCP ಯೋಜನೆಯಲ್ಲಿ ಬೋರ್ ವೆಲ್ ತೆಗೆಸಿದ್ದು, ಈವರೆಗೆ ಟಿ.ಸಿ.ಹಾಕಿ ಕೊಟ್ಟಿಲ್ಲ ಎಂದು ಕೋರಿದರು. | ಈ ಬಗ್ಗೆ ಪ್ರತಿಕ್ರಿಯಿಸಿ, ಟಿ.ಸಿ.ಯನ್ನು ನೀರಾವರಿ ಇಲಾಖೆಯಿಂದ ಹಾಕಿ ಕೊಡಲು ಈ ಯೋಜನೆಯಡಿ ರೂಪಿಸಿದ್ದು ನೀರಾವರಿ ಇಲಾಖೆಯ ಕಾರ್ಯ ನಿರ್ವಾಹಕ ಇಂಜಿನಿಯರ್ ರವರಿಗೆ ದೂರವಾಣಿ ಕರೆಮಾಡಿ ಸೂಚಿಸಲಾಯಿತು ಹಾಗೂ ಪತ್ರ ಬರೆದು ಸಹ ಕೋರಲಾಗುವುದು ಎಂದು ಸೂಚಿಸಲಾಯಿತು. |
| | ಗ್ರಾಹಕರು – ಶ್ರೀ ರಾಘವೇಂದ್ರ ಮದ್ದೂರು 7204670295 | |
| 10 | ಮನೆ ನಿರ್ಮಾಣ ಮಾಡಲು ಉದ್ದೇಶಿಸಿರುವ ಜಾಗದಲ್ಲಿ ಟಿ.ಸಿ. ಇದ್ದು, ಸ್ಥಳಾಂತರಿಸಲುಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು. |

| ಕ್ರ.ಸಂಖ್ಯೆ | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರ ಸಲಹೆಗಳು |
|---|---|
| 1 | ದೂರುದಾರರು ಕೋರಿದ್ದಲ್ಲಿ ಸಭಾ ನಡಾವಳಿಯ ಪ್ರತಿಯನ್ನು ನೀಡಲು ಸೂಚಿಸಲಾಯಿತು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 1.30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ನಗರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಮು.ಕ